ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ರಾಯಚೂರು
ಸಿ.ಸಿ.ನಂಬರು.380/2010
ಸಿಡಬ್ಲ್ಯೂ ನಂ-10 ಪಿಡಬ್ಲ್ಯೂ ನಂ-8
ಪ್ರಮಾಣೀಕರಿಸಿದ ದಿನಾಂಕಃ14-7-2014

| | |
|---|---|
| ಸಾಕ್ಷಿದಾರನ ಹೆಸರು | ಃಃ ಯಲ್ಲಮ್ಮಾ |
| ತಂದೆಃ ಗಂಡನ ಹೆಸರು | ಃಃ ಗಂಗಪ್ಪಾ |
| ವಯಸ್ಸು | ಃಃ 42ವರ್ಷ |
| ಉದ್ಯೋಗ | ಃಃ ಕೂಲಿ ಕೆಲಸ |
| ವಿಳಾಸ | ಃಃ ರಾಯಚೂರು |
| ಮುಖ್ಯ ವಿಚಾರಣೆ | ಃಃ ಹಿ.ಸ.ಸ.ಅ. ಅವರಿಂದ |

ನನಗೆ ನ್ಯಾಯಾಲಯದ ಮುಂದಿರುವ ಆರೋಪಿಗಳ ಪರಿಚಯ ಇದೆ. ನನಗೆ ಸುಲೋಚನಾಳ ಪರಿಚಯ ಇದೆ. ನನಗೆ ಪಿರ್ಯಾದಿದಾರರ ಪರಿಚಯ ಇದೆ. ಪದ್ಮಾ ನನ್ನ ಮಗಳು. ಅವರು ಐದು ವರ್ಷಗಳ ಹಿಂದೇ ಚೀಟಿ ವ್ಯೆವಹಾರ ಮಾಡುತ್ತಿದ್ದರು. ನಾನು ಅವರ ಬಳಿ ಎರಡು ಚೀಟಿ ಹಾಕಿದ್ದೆ. 60 ಜನಾ ಸದಸ್ಯರು ಇದ್ದೇವು. ನಾನು 5,000/- ರೂ. ಗಳ ಎರಡುಚೀಟಿ ಹಾಕಿದ್ದೆ. ಆರೋಪಿ ಬಸ್ಸಮ್ಮಾಳ ಮನೆಯಲ್ಲಿ ಚಿಟಿ ಮಾಡಲಾಗುತ್ತಿತ್ತು. ಒಬ್ಬರು ಪ್ರತಿ ತಿಂಗಳು 5,000/- ರೂ. 1ನೇ ಆರೋಪಿ ಮನೆಯಲ್ಲಿ ಪ್ರತಿ ತಿಂಗಳ 10ನೇ ತಾರಿಕು ಚೀಟಿ ನಡೆಯುತಿತ್ತು. 1 ಮತ್ತು 2ನೇ ಆರೋಪಿಗಳು ಹಣ ಸಂಗ್ರಹಿಸುತ್ತಿದ್ದರು. 5,000/- ಕ್ಕೆ 10,000/- ರೂ. ಕೊಡುವುದಾಗಿ ಹೇಳಿದ್ದರು. ನನಗೆ 5,000/- ರೂ. ಬರಬೇಕಾಗಿದೆ. ನಂತರ ಆರೋಪಿಗಳ ಮನೆಬಳಿ ಹೋದಾಗ ಅವರು ಸಿಗಲಿಲ್ಲ ಆದುದ್ದರಿಂದ ಪಿರ್ಯಾದಿದಾರರು ಪೋಲಿಸರಿಗೆ ದೂರು ಕೊಟ್ಟಿದ್ದಾರೆ. ಪೋಲಿಸರು ತನಿಖೆ ಮಾಡಿ ನನ್ನ ಹೇಳಿಕೆ ಪಡೆದಿದ್ದಾರೆ. ದೂರು ಕೊಟ್ಟ ನಂತರ ಆರೋಪಿಗಳು ಸಿಕ್ಕಿದ್ದರು. ಆರೋಪಿಗಳು ನನಗೆ ರಶೀದಿಗಳನ್ನು ಕೊಟ್ಟಿದ್ದು ಅದು ನನ್ನ ಮಗಳ ಹೆಸರಿನಲ್ಲಿ ಇದ್ದು ಅದನ್ನು ನಾನು ಈ ದಿನಾ ನ್ಯಾಯಾಲಯದ ಮುಂದೆ ನೋಡುತಿದ್ದು ಅವುಗಳನ್ನು ನಿಪಿ.25 ಎಂದು ಗುರುತಿಸಲಾಯಿತು.

ಪಾಟೀಸವಾಲುಃ1 ರಿಂದ 3ನೇ ಆರೋಪಿಪರ ಶ್ರೀ ಎಮ್. ಎಸ್. ಹೆಚ್. ವಕೀಲರಿಂದಃ-

ನಾನು ಚೀಟಿ ಹಾಕಿದ ಸಂಸ್ಥೆ ಹೆಸರು ಗೊತ್ತಿಲ್ಲ. ರಶೀದಿಗಳಲ್ಲಿ 1ನೇ ಆರೋಪಿ ಸಹಿ ಇಲ್ಲ ಎಂದರೆ ಸರಿಯಲ್ಲ. ಅವು ಬಸಮ್ಮಾ ಕೊಟ್ಟಿದ್ದು ಅಲ್ಲಾ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಆರೋಪಿಗಳು ಯಾವುದೇ ಚೀಟಿ ನಡೆಸಿಲ್ಲ ಎಂದರೆ ಸರಿಯಲ್ಲ. ಯಾವುದೇ ರಶೀದಿಗಳನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಪೋಲಿಸರಿಗೆ ದೂರು ಕೊಟ್ಟಿಲ್ಲ. ಸಿದ್ದಲಿಂಗಮ್ಮಾ ಪೋಲಿಸರಿಗೆ ದೂರು ಕೊಟ್ಟಿದ್ದಾಳೆ. ಪೋಲಿಸರು ನನ್ನ ಹೇಳಿಕೆ ಪಡೆದುಕೊಂಡಿದ್ದಾರೆ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀಸವಾಲುಃ4ನೇ ಆರೋಪಿಪರ ಶ್ರೀ ಆರ್ ಕೆ. ವಕೀಲರಿಂದಃ–

ನಾನು ದೂರುಕೊಡಲು ಹೋದ ದಿನಾ 4ನೇ ಆರೋಪಿತಳು ಬಂದಿದ್ದಳು. ಆಕೇಯು ಕೂಡಾ ನಾಲ್ಕು ಚೀಟಿಗಳು ಹಾಕಿದ್ದಾಳೆ. 4ನೇ ಆರೋಪಿ ನನ್ನಿಂದ ಯಾವುದೇ ಹಣ ಪಡೆದಿಲ್ಲ ಮತ್ತು ಯಾವುದೇ ರಶೀದಿ ಕೊಟ್ಟಿಲ್ಲ. ನನಗೂ ಮತ್ತು 4ನೇ ಆರೋಪಿಯೊಂದಿಗೆ ಯಾವುದೇ ಹಣದ ವ್ಯೆವಹಾರ ಇಲ್ಲ. ನಾನು 4ನೇ ಆರೋಪಿ ವಿರುದ್ದ ದೂರು ಕೊ ಟ್ಟಿಲ್ಲ. 4ನೇ ಆರೋಪಿ ವಿರುದ್ದ ಯಾವುದೇ ಮರು ಹೇಳಿಕೆ ಕೊಟ್ಟಿಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನೆ ಮೇರೆಗೆ ಬೆರಳಚ್ಚುಗಾರರು ಬೆರಳಚ್ಚು ಮಾಡಿರುತ್ತಾರೆ ಮತ್ತು ಅದನ್ನು ಸಾಕ್ಷಿಗೆ ಓದಿ ತಿಳಿಸಿ ಹೇಳಿದಾಗ ಸಾಕ್ಷಿ ಸರಿ ಇದೆ ಅಂತಾ ಒಪ್ಪಿಕೊಂಡಿರುತ್ತಾರೆ.)

ಮುಖ್ಯ ನ್ಯಾಯಿಕ ದಂಡಾಧಿಕಾರಿ, ರಾಯಚೂರು.